ಆ. ಕೆದನೂರು ಗ್ರಾಮ ಕರ್ನಾಟಕ ಪ್ರವಾಸೋದ್ಯಮ ನೀತಿಯ ರೀತ್ಯ 'ಬಿ' ಗುಂಪಿನಡಿ ಬರುತ್ತದೆ. ಈ ಸ್ಥಳದಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳು ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡುವುದು.

Sri K.C. Modagekar Desai:– Speaker Sir, the Government has agreed to give 20% as Investment Subsidy apart from incentives and concessions to Private Entrepreneur. Will the Government increase the investment subsidy to 40% atleast, instead of 20%?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಸಭಾಧ್ಯಕ್ಷರೆ, ಸಬ್ಸಿಡಿ ವಿಚಾರ, ಇದು ರಾಜ್ಯದ ಒಂದು ನೀತಿಯಾಗಿದೆ. ಎ, ಬಿ, ಸಿ, ಕ್ಯಾಟಗರಿಯೆಂದು ಮಾಡಿ 'ಬಿ' ಕ್ಯಾಟಗರಿಗೆ 20 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಸಿ ಕ್ಯಾಟಗರಿಗೆ 25 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಆದ್ದರಿಂದ ಒಂದೊಂದು ಸ್ಥಳಕ್ಕೆ ಸಬ್ಸಿಡಿ ಕೊಡುವ ವಿಚಾರದಲ್ಲಿ ಬೇರೆ ಬೇರೆ ತರಹ ಕೊಡುವುದಕ್ಕೆ ಬರುವುದಿಲ್ಲ. ಸಬ್ಸಿಡಿಗೆ ಖಾಸಗಿಯವರು ಯಾರಾದರೂ ಮುಂದೆ ಬಂದರೆ ಅವರಿಗೆ ಈ ಪ್ರೇಕ್ಷಣೀಯ ಸ್ಥಳಕ್ಕೆ 20 ಪರ್ಸೆಂಟ್ ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ.

Sri K.C. Modagekar Desai:– Sir, since it is a rural area, I am once again requesting the Government through you Sir, to consider to increase the subsidy and make provision during this financial year.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಸಧ್ಯಕ್ಕೆ ಆದನ್ನು ಮಾಡಲಿಕ್ಕೆ ಬರುವುದಿಲ್ಲ.

ವರಕವಿ ಸರ್ವಜ್ಞ, ಸ್ಮಾರಕ ನಿರ್ಮಾಣ.

185 (1286): ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ವರಕವಿ ಸರ್ವಜ್ಞನ ಜನ್ಮಸ್ಥಳವಾದ ಹಿರೇಕೆರೂರು ತಾಲ್ಲೂಕು ಆಬಲೂರು ಗ್ರಾಮದಲ್ಲಿ ಸರ್ವಜ್ಞನ ಸ್ಮಾರಕ ಹಾಗೂ ಸುವ್ಯವಸ್ಥಿತವಾದ ಸಂಪರ್ಕ ರಸ್ತೆ, ಪ್ರವಾಸಿ ಮಂದಿರ ಇಲ್ಲದೇ ಇರುವುದನ್ನು ಸರ್ಕಾರ ಗಮನಿಸಿದೆಯೇ ?

ಆ. ಆಬಲೂರಿನಲ್ಲಿ ಸರ್ವಜ್ಞ ಸ್ಮಾರಕ, ಪ್ರವಾಸಿ ಮಂದಿರ, ಸ್ಮಾರಕ ಭವನ, ನಗ್ಗೆರೆ ನಿರ್ಮಿಸಲು ಸರ್ಕಾರ ಯೋಜಿಸಿದೆಯೇ ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮವೇನು ?

ಇ. ಈ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ ? ಈ ಬಗ್ಗೆ ಹಾಕಿಕೊಂಡ ಯೋಜನೆ ಮತ್ತು ತಗಲುವ ವೆಚ್ಚವೆಷ್ಟು ?

ಈ. ಈ ಗ್ರಾಮಕ್ಕೆ ಯಾವ ಯಾವ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು:

ಉ. ಈ ಪ್ರವಾಸಿ ಕೇಂದ್ರಕ್ಕೆ 1993–94ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಮೊತ್ತ ಎಷ್ಟು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು.)

ಅ. ಹೌದು.

ಆ. ಸರ್ವಜ್ಞ ಸ್ಮಾರಕ, ಪ್ರವಾಸಿ ಮಂದಿರ, ಸ್ಮಾರಕ ಭವನ, ವಗೈರೆ ನಿರ್ಮಿಸುವ ಯೋಜನೆ ಪ್ರವಾಸೋದ್ಯಮ ಇಲಾಖೆ ಮುಂದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯವನ್ನು ಸರ್ವಜ್ಞ ಸ್ಮಾರಕ ನಿರ್ಮಿಸುವ ಬಗ್ಗೆ ಪರ್ಯಾಲೋಚಿಸಲು ವಿನಂತಿಲಾಗುವುದು.

ಇ. ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಅಬಲೂರನ್ನು 'ಸಿ' ಗುಂಪಿನಡಿಯಲ್ಲಿ ಸೇರಿಸಿದ್ದು ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಹೆಚ್ಚಿನ ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನೆಗಳನ್ನು ನೀಡಲಾಗುವುದು.

ಈ. ಉದ್ಭವಿಸುವುದಿಲ್ಲ.

ಉ. 1993-94ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಯೋಜನೆಗಳ ವಿವರಗಳನ್ನು ಇನ್ನು ರೂಪಿಸಬೇಕಿದೆ. ಸ್ಮಾರಕವನ್ನು ಕಟ್ಟುವ ಬಗ್ಗೆ ಪರಿಗಣಿಸಲಾಗುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೆ, ಸರ್ವಜ್ಞ ಕವಿಯ ಹೆಸರನ್ನು ಎಲ್ಲರೂ ಹೇಳುತ್ತಿದ್ದೇವೆ. ಧಾರವಾಡ ಜಿಲ್ಲೆಯ ಹಿರೇಕೇರೂರು ತಾಲ್ಲೂಕಿನ ಅಬಲೂರಿನಲ್ಲಿ ಜನಿಸಿದ. ಆ ಗ್ರಾಮಕ್ಕೆ ಒಂದು ಒಳ್ಳೆಯ ರಸ್ತೆಯಾಗಲೀ ಒಂದು ಒಳ್ಳೆಯ ಪ್ರವಾಸೀ ಕೇಂದ್ರ ಇಲ್ಲವೆಂದು ಹೇಳಲಿಕ್ಕೆ ನನಗೆ ವಿಷಾದವಾಗುತ್ತದೆ. ಸರ್ಕಾರದವರು ಇದನ್ನು ಪ್ರವಾಸೀ ಕೇಂದ್ರವನ್ನಾಗಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಿರ್ದಿಷ್ಟವಾಗಿ ಏನೂ ಇಲ್ಲ. ಸ್ಮಾರಕಭವನ ಮಾಡುವ ಬಗ್ಗೆ, ಡಾಂಬರು ರಸ್ತೆ ಮಾಡುವ ಬಗ್ಗೆ ಈ ಐತಿಹಾಸಿಕ ಸ್ಥಳಕ್ಕೆ ಬರುವ ಹೋಗುವ ಜನರಿಗೆ ಸರ್ಕಾರ ಯಾವುದೇ ಸೌಕರ್ಯವನ್ನಾಗಲೀ, ರಸ್ತೆಯ ಸೌಲಭ್ಯ ಮಾಡುವ ಬಗ್ಗೆ ಸ್ಪಷ್ಟವಾದ ಉತ್ತರವಿಲ್ಲ. ದಯವಿಟ್ಟು ಅಲ್ಲಿ ಒಂದು ಸ್ಮಾರಕಭವನ ಮತ್ತು ಡಾಂಬರು ರಸ್ತೆಯನ್ನು ಮಾಡುವುದರ ಜೊತೆಗೆ ಪ್ರವಾಸೀಕೇಂದ್ರವನ್ನು ಮಾಡಲಿಕ್ಕೆ ಇದೇ ವರ್ಷದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಸಭಾಧ್ಯಕ್ಷರೆ, ಕನ್ನಡಿಗರ ಮನೆ ಮಾತಾಗಿರುವ ಸರ್ವಜ್ಞರ ಹುಟ್ಟೂರಾದ ಅಬಲೂರು ಒಂದು ಐತಿಹಾಸಿಕ ಸ್ಥಳ. ಈ ಗ್ರಾಮವು 12ನೆಯ ಶತಮಾನದಲ್ಲಿ ಜೈನರ ಪ್ರಾಬಲ್ಯದಲ್ಲಿತ್ತು. 17ನೆಯ ಶತಮಾನದಲ್ಲಿ ಇಲ್ಲಿ ಸರ್ವಜ್ಞ ಜನಿಸಿ ಆ ಊರು ಖ್ಯಾತಿಯನ್ನು ಹೊಂದಿದೆ. ಪ್ರವಾಸೋದ್ಯಮ ಇಲಾಖೆಯು ಇದನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಿ 'ಸಿ' ಗುಂಪಿನಲ್ಲಿ ಸೇರಿಸಿದೆ. ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆಗೆ ಶೇಕಡ 25ರಷ್ಟು ಸಬ್ಸಿಡಿ ಹಾಗೂ ಇತರ ರಿಯಾಯಿತಿ ಉತ್ತೇಜನಗಳನ್ನು ನೀಡಲಿದೆ ಸರ್ವಜ್ಞರು ಪ್ರಖ್ಯಾತಿ ಹೊಂದಿದ ಕವಿಗಳು. ಎಲ್ಲಾ ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಸರ್ವಜ್ಞ ಕವಿಗಳು ರಚನೆ ಮಾಡಿರತಕ್ಕ ಸಾಹಿತ್ಯ ಮನೆ ಮಾತಾಗಿದೆ. ಸರ್ವಜ್ಞರ ಕವನಗಳನ್ನು ಕೇಳದಿರುವವರು ಕರ್ನಾಟಕ ರಾಜ್ಯದಲ್ಲಿ ಯಾರೂ ಇಲ್ಲ. ದುರದೃಷ್ಟಕರ ಇಷ್ಟು ವರ್ಷಗಳಾದರೂ ಸರ್ವಜ್ಞರ ಒಂದು ಸ್ಮಾರಕಭವನ, ಅಲ್ಲೊಂದು ರೀಸರ್ಚ್ ಸೆಂಟರ್ ಯಾವುದೂ ಆಗಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಇದು ಬರುತ್ತದೆ. ಆದರೂ ಸರ್ವಜ್ಞರ ನೆನಪಿಗೋಸ್ಕರ ಟೂರಿಸಂ ಇಲಾಖೆಯಿಂದ ಸ್ಮಾರಕಭವನ ಕಟ್ಟಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿ ಅವರಿಂದ ಅಂದಾಜು ತರಿಸಿ ಸ್ಮಾರಕಭವನ ಕಟ್ಟಲು ಏನು ಮಾಡಬೇಕೋ ಅದನ್ನು ಮಾಡಲು ನಾವು ಒಪ್ಪಿರುತ್ತೇವೆ.

ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮತ್ತೆ ರೋಡ್ಸ್ ಮಾಡಬೇಕಾದರೆ ಇದು ಪಿ.ಡಬ್ಲ್ಯೂ.ಡಿ.ಗೆ ಬರುತ್ತದೆ. ನನ್ನ ಮಾಹಿತಿ ಪ್ರಕಾರ ಪಿ.ಡಬ್ಲ್ಯೂ.ಡಿ. ಇಲಾಖೆಯವರು ಹಿರೇಕೆರೂರು ಅಬಲೂರು–ಕೋಡಾ ಇಂತಹ ರೋಡ್‌ಗಳನ್ನು ರಿಪೇರಿ ಮಾಡಲು ಅವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಾಗಿದೆ. ಪಿ.ಡಬ್ಲ್ಯೂ.ಡಿ. ಮಂತ್ರಿಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳನ್ನು ಸೇರಿಸಿ ಒಂದು ಜಂಟಿಸಭೆಯನ್ನು ಕರೆದು ಸರ್ವಜ್ಞ ಹುಟ್ಟಿದ ಸ್ಥಳವನ್ನು ಅಭಿವೃದ್ಧಿಪಡಿಸಲು 93–94ನೇ ಸಾಲಿಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ.

ಶ್ರೀ ಬಿ.ಎಚ್. ಬನ್ನಿಕೋಡ್:– ಮಾನ್ಯ ಸಚಿವರು ಹೇಳಿದರು ತಮ್ಮ ಇಲಾಖೆಯಿಂದ ಸ್ಮಾರಕ ಭವನ ಕಟ್ಟುತ್ತೇವೆ ಎಂದು. ಯಾವಾಗ ಕಟ್ಟಿಸುತ್ತೀರಿ, ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ನಿರ್ದಿಷ್ಟವಾಗಿ ಏನಾದರೂ ಮಾಡುವುದಿದ್ದರೆ ನಿರ್ಣಯ ತೆಗೆದುಕೊಂಡು ಯಾವಾಗ ಮಾಡುತ್ತೀರಿ ? ರಸ್ತೆ ಇಲ್ಲವೆಂದು ಹೇಳಿದರೆ ಸಮಾಲೋಚನೆ ಮಾಡುತ್ತೇವೆ ಎಂದು ಹೇಳಿದರು. ಈಗಾಗಲೇ ಸರ್ಕಾರದ ಮುಂದೆ ಆ ಬಗ್ಗೆ ಇದೆ. ಅವರು ನಿರ್ದಿಷ್ಟವಾಗಿ ಒಂದು ಉತ್ತಮ ರಸ್ತೆಯನ್ನು, ಮತ್ತು ಅಲ್ಲಿ ಪ್ರವಾಸಿ ಮಂದಿರವನ್ನು ಮತ್ತು ಸ್ಮಾರಕಭವನವನ್ನು ತಮ್ಮ ಇಲಾಖೆಯಿಂದ ಮಾಡಬೇಕು. ಮತ್ತು ವಚನ ಪುಸ್ತಕ ಕೂಡ ಸಿಗುತ್ತಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅವುಗಳನ್ನು ಪ್ರಿಂಟ್ ಮಾಡಿಸಿ ಅಲ್ಲಿ ಒಂದು ರೀಸರ್ಚ್ ಇನ್ಸ್ಟಿಟ್ಯೂಟ್ ಅಥವಾ ಮ್ಯೂಸಿಯಂನ್ನು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹಾಗೂ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಅದಕ್ಕೇ ನಾನು ಹೇಳಿದ್ದು, ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಗಳನ್ನು ಮತ್ತು ಕನ್ನಡ ಸಂಸ್ಕೃತಿ ಸಚಿವರನ್ನು ಜೊತೆಗೆ ಕರೆದು ಮಾತನಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ನಾನು ಕನ್ನಡ ಮತ್ತು ಸಂಸ್ಕೃತಿ ಸಚಿವರ ಜೊತೆ ಮಾತನಾಡಿದ್ದೇನೆ. ಅವರು ರೀಸರ್ಚ್ ಸೆಂಟರ್ ಮಾಡುವುದಕ್ಕೆ ಒಪ್ಪಿದ್ದಾರೆ. ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ 93–94ನೇ ಇಸವಿಯಲ್ಲಿ ಈ ಕಾರ್ಯ ಪ್ರಾರಂಭ ಆಗುವುದಕ್ಕೆ ಏನು ಬೇಕೋ ಅದನ್ನು ಏರ್ಪಾಡು ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಪಿ.ಆರ್. ಸಿಂಧ್ಯ:– ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಈ ವಿಚಾರದಲ್ಲಿ ಸೆಳೆಯುತ್ತಿದ್ದೇನೆ. ಅವರು ಕಲೆ ಬಗ್ಗೆ, ಭಾಷೆ ಬಗ್ಗೆ, ಸಂಸ್ಕೃತಿ ಬಗ್ಗೆ ಬಹಳ ಅಭಿಮಾನ ಇರತಕ್ಕಂಥ ಮುಖ್ಯಮಂತ್ರಿಗಳು. ಸರ್ವಜ್ಞ ಹುಟ್ಟಿರತಕ್ಕಂಥ ನಾಡಿನಿಂದ ಅನೇಕ ಜನ ಮಂತ್ರಿಗಳು ಬಂದಿದ್ದಾರೆ. ತಮ್ಮ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡಿರತಕ್ಕಂಥ ಮಹನೀಯರೂ ಇದ್ದಾರೆ. ಆದರೆ ಇದನ್ನು ಮರೆತು ಮಾಡದೇ ನನ್ನ ಸರ್ಕಾರ ಇರತಕ್ಕಂಥಾದ್ದು ಒಂದು ರೀತಿಯಲ್ಲಿ ನಾಚಿಕೆಗೇಡಿತನದ ವಿಚಾರವೆಂದು ಹೇಳಬೇಕಾಗುತ್ತದೆ. ಇದನ್ನು ಮಾಡಬೇಕೆಂಬ ಉದ್ದೇಶವನ್ನು ಇಟ್ಟಿದ್ದಾರೆ ಮತ್ತು ಭರವಸೆಯನ್ನು ಸಹಿತ ಕೊಟ್ಟಿದ್ದಾರೆ. ಇದಕ್ಕೆ ಬೇಕಾಗಿರತಕ್ಕಂಥ, ಹಣವನ್ನು ತಾವು ಈ ವರ್ಷ ಒದಗಿಸಿಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸಬೇಕಾಗಿ ಕೇಳುತ್ತೇನೆ. ಏಕೆಂದರೆ ಸ್ಮಾರಕ ಮಾಡಬೇಕೆಂದರೆ ಕೊನೆಯ ಪಕ್ಷ ಐವತ್ತು ಲಕ್ಷ, ಒಂದು ಕೋಟಿ ರೂಪಾಯಿ ಬೇಕಾಗುತ್ತದೆ. ಅದನ್ನು ಈ ವರ್ಷದಲ್ಲೇ ಒದಗಿಸಿಕೊಡುವುದಕ್ಕೆ ಸಾಧ್ಯವೇ ಎಂದು ತಾವು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– 1993–94ರಲ್ಲಿ ಆಗತ್ಯವಾದ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.